**ದಿಃ02.12.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಎಸ್.ಬಿ. ವಕೀಲರಿಂದಃ**

ವಾದ ಪತ್ರದಲ್ಲಿ ತೋರಿಸಿರುವ ದಾವಾ ಆಸ್ತಿಯ ಚೆಕ್ ಬಂದಿ ವಾಸ್ತವವಾಗಿ ಇದೆ ಎಂದರೆ ಸರಿ. 1984 ರಲ್ಲಿ ಖರೀದಿಸಿರುವ ನಿಪಿ 3 ರ ಕ್ರಯ ಪತ್ರದಲ್ಲಿರುವ ಚೆಕ್ಕ್ ಬಂದಿಗೂ ದಾವಾ ಆಸ್ತಿಯಲ್ಲಿ ತೋರಿಸಿರುವ ಚೆಕ್ ಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಬರೆದುಕೊಟ್ಟ ಕ್ರಯ ಪತ್ರ, ನಂತರ 3 ನೇ ಪ್ರತಿವಾದಿ, 4 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರಗಳಲ್ಲಿರುವ ಚೆಕ್ ಬಂದಿಗಳನ್ನು ನಾನು ನೋಡಿಲ್ಲ. ನಿಪಿ 5 ರಿಂದ ನಿಪಿ 8 ರ ಕ್ರಯ ಪತ್ರಗಳಲ್ಲಿರುವ ಚೆಕ್ ಬಂದಿಯನ್ನು ನನ್ನ ಕ್ರಯ ಪತ್ರದ ಚೆಕ್ ಬಂದಿಗೆ ತಾಳೆ ಮಾಡಿ ನೋಡಿಲ್ಲ.

1 ನೇ ಪ್ರತಿವಾದಿ ಎಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರ ವಿಳಾಸವನ್ನು ನಾನು ವಾದ ಪತ್ರದಲ್ಲಿ ತೋರಿಸಿಲ್ಲ. 4 ನೇ ಪ್ರತಿವಾದಿ ನನಗೆ ಗೊತ್ತಿಲ್ಲ. ಅವರನ್ನು ನಾನು ನೋಡಿಲ್ಲ. ಅವರು ಎಲ್ಲಿ ವಾಸವಿದ್ದಾರೆ ಎಂದು ಗೊತ್ತಿಲ್ಲ. ಅವರ ವಿಳಾಸವನ್ನು ನನ್ನ ವಕೀಲರಿಗೆ ನಾನು ಹೇಳಿಲ್ಲ. 4 ನೇ ಪ್ರತಿವಾದಿಯ ಗಂಡ ನನಗೆ ಪರಿಚಯ ಇಲ್ಲ. ನಾನು ದಾವಾ ಆಸ್ತಿಯನ್ನು ಖರೀದಿಸಿದ ಮೂಲ ಕ್ರಯ ಪತ್ರ ಕಳೆದು ಹೋಗಿದೆ. ದಿಃ03.11.2012 ರಂದು ದಾವಾ ಆಸ್ತಿಯ ಬಳಿ ಹೋದಾಗ 4 ನೇ ಪ್ರತಿವಾದಿಯ ಕಡೆಯವರು ದಾವಾ ಆಸ್ತಿಯು 4 ನೇ ಪ್ರತಿವಾದಿಗೆ ಸೇರಿದೆ ಎಂದು ಹೇಳಿದಾಗ ಮೂಲ ಕ್ರಯ ಪತ್ರ ಕಳೆದುಹೋಗಿದೆ ಎಂದು ತಿಳಿದು ಬಂತು. ನಾನು ಕ್ರಯ ಪತ್ರ ಕಳೆದು ಹೋಗಿದೆ ಎಂದು ಪೊಲೀಸರಿಗೆ ದೂರು ನೀಡಿಲ್ಲ. ಈ ಸಂಗತಿಯನ್ನು ಪತ್ರಿಕಾ ಪ್ರಕಟಣೆ ಮೂಲಕ ನೀಡಿಲ್ಲ. 4 ನೇ ಪ್ರತಿವಾದಿಯ ಕಡೆಯವರು ಆಸ್ತಿಯ ಬಳಿ ಇದ್ದ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ. ನಾನು ನನ್ನ ವಕೀಲರಿಗೆ 4 ನೇ ಪ್ರತಿವಾದಿ ಮತ್ತು ಆಕೆಯ ಗಂಡ ದಾವಾ ಆಸ್ತಿಯ ಬಳಿ ಇದ್ದರು ಎಂದು ಹೇಳಿರುವುದಿಲ್ಲ.

ದಿಃ03.11.2012 ರಂದು ನಾನು ದಾವಾ ಆಸ್ತಿಯ ಬಳಿ ಹೋಗಿಲ್ಲ ಮತ್ತು 4 ನೇ ಪ್ರತಿವಾದಿ ಕಡೆಯವರು ಆಸ್ತಿಯ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಒಂದು ಘಟನೆ ಆಗಿದೆ ಎಂದು ನಾನು ವಾದ ಪತ್ರದಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸುಮಾರು 10-12 ವರ್ಷಗಳ ಹಿಂದೆ ದಾವಾ ಆಸ್ತಿಯ ಸುತ್ತ ನಾನು ಕಾಂಪೌಂಡ್

ಕಟ್ಟಿಸಿದ್ದೇನೆ. ನಾನು ಮುನ್ಸಿಪಾಲಿಟಿಯಿಂದ ಕಾಂಪೌಂಡ್ ಹಾಕಲು ಅನುಮತಿ ಪಡೆದಿಲ್ಲ. ನಾನು 3 ದಿಕ್ಕಿನಲ್ಲಿ ಕಾಂಪೌಂಡ್ ಹಾಕಿದ್ದೇನೆ. ದಾವಾ ಆಸ್ತಿಯ ಹಿಂಭಾಗದಲ್ಲಿ ಬರೆ ಇರುವುದರಿಂದ ಕಾಂಪೌಂಡ್ ಹಾಕಿಲ್ಲ. ಉತ್ತರ ದಿಕ್ಕಿಗೆ ಕಾಲು ದಾರಿ ಇದೆ. ಉತ್ತರ ದಿಕ್ಕಿಗೆ ಅಂದರೆ ಕಾಲು ದಾರಿ ಮತ್ತು ನನ್ನ ನಿವೇಶನದ ಮಧ್ಯೆ ಪೂರ್ಣ ಭಾಗ ಕಾಂಪೌಂಡ್ ಇದೆ. ಸದರಿ ಕಾಂಪೌಂಡ್ ನ್ನು ನಿವೇಶನ ಸ್ವಚ್ಛ ಮಾಡುವಾಗ ತೆಗೆಸಿ ಹಾಕಿದ್ದೇನೆ. ಈಗ ಅಲ್ಲಿ ಕಾಂಪೌಂಡ್ ಇರುವುದಿಲ್ಲ. ನಾನು ಗಲಾಟೆ ಆಗಿದೆ ಎಂದು ಹೇಳುವ ದಿನ ಕಾಂಪೌಂಡ್ ಇರಲಿಲ್ಲ.

ನನ್ನ ನಿವೇಶನದ ಎರಡೂ ಕಡೆಗಳಲ್ಲಿ ವಾಸದ ಮನೆಗಳು ಇವೆ. ಅವುಗಳನ್ನು ಯಾವಾಗ ಕಟ್ಟಿದ್ದಾರೆ ಎಂದು ಗೊತ್ತಿಲ್ಲ. ಒಂದು ವರ್ಷದ ಹಿಂದೆ ಆ ಮನೆಗಳನ್ನು ನಾನು ನೋಡಿದ್ದೇನೆ. ಆ ಮನೆಗಳ ಮಾಲೀಕರು ಯಾರು ಎಂದು ಗೊತ್ತಿಲ್ಲ. ಮೂಲ ಕ್ರಯ ಪತ್ರವನ್ನು ನಾನು 1ನೇ ಪ್ರತಿವಾದಿಗೆ ಕರಾರು ಪತ್ರ ಬರೆದುಕೊಡುವಾಗ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮೂಲ ಕ್ರಯ ಪತ್ರ ಕಳೆದು ಹೋದ ಬಗ್ಗೆ ನನ್ನ ವಾದ ಪತ್ರದಲ್ಲಿ ಹೇಳಿದ್ದೇನೆ. ನಾನು ದಾವಾ ಆಸ್ತಿಯನ್ನು 1ನೇ ಪ್ರತಿವಾದಿಗೆ ಅಧಿಕಾರ ಪತ್ರ ಮತ್ತು ಕರಾರು ಪತ್ರ ಮಾಡಿಕೊಟ್ಟು ಸ್ವಾಧೀನ ವಹಿಸಿದ್ದೇನೆ ಎಂದರೆ ಸರಿಯಲ್ಲ. ಕಾಂಪೌಂಡ್ ಗೋಡೆಯು ಬಿದ್ದು ಹೋದ ವಿಚಾರವನ್ನು ನನ್ನ ವಕೀಲರಿಗೆ ಹೇಳಿಲ್ಲ. ಕಾಂಪೌಂಡ್ ಕಟ್ಟಿದ ಬಗ್ಗೆ ಮತ್ತು ಅದು ಬಿದ್ದು ಹೋದ ಬಗ್ಗೆ ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದು ಸತ್ಯ ಸಂಗತಿಯಲ್ಲ ಎಂದರೆ ಸರಿಯಲ್ಲ. ಆಸ್ತಿಯನ್ನು ಮಾರಾಟ ಮಾಡುವಾಗ ಮೂಲ ದಾಖಲೆಯನ್ನು ಖರೀದಿದಾರರಿಗೆ ಕೊಡುವ ವಿಚಾರ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಬೇರೆ ಯಾವುದೇ ಆಸ್ತಿಗಳು ಇಲ್ಲ.

ಮಡಿಕೇರಿಯ ಕರ್ನಾಟಕ ಬ್ಯಾಂಕ್ ನಲ್ಲಿ ನಾನು ಯಾವಾಗ ಬ್ಯಾಂಕ್ ಖಾತೆ ತೆಗೆದಿದ್ದೇನೆ ಎಂದು ನೆನಪಿಲ್ಲ. ನಿಪಿ 9ರಲ್ಲಿ ನನ್ನ ಸಹಿ ಇದೆ. ನಿಪಿ 9ರಲ್ಲಿರುವ ಸಹಿಯನ್ನು ನಾನು ಬ್ಯಾಂಕ್ ಖಾತೆ ತೆಗೆಯುವಾಗ ಮಾಡಿದ್ದೇನೆ. ನಿಪಿ 9ರ ದಾಖಲೆಯನ್ನು ದಿಃ2.2.2013ರಲ್ಲಿ ಪಡೆದುಕೊಂಡಿದ್ದೇನೆ. ಕರ್ನಾಟಕ ಬ್ಯಾಂಕ್ ನಲ್ಲಿ ಮೊದಲ ಬಾರಿಗೆ ನಾನು ಖಾತೆ ತೆಗೆದಿದ್ದೇನೆ. ಅದಕ್ಕೂ ಪೂರ್ವದಲ್ಲಿ ನನ್ನ ಹೆಸರಿನಲ್ಲಿ ಯಾವುದೇ ಬ್ಯಾಂಕ್

ಖಾತೆಗಳು ಇರಲಿಲ್ಲ. ಈ ದಾವೆ ಹಾಕುವ ಸಲುವಾಗಿ ಬ್ಯಾಂಕಿನಲ್ಲಿ ಖಾತೆ ತೆಗೆದಿದ್ದೇನೆ ಎಂದರೆ ಸರಿಯಲ್ಲ. 1994 ರಿಂದ 1996 ರ ನಡುವೆ ಸಾರ್ವಜನಿಕ ದಾಖಲೆಗಳಲ್ಲಿ ನನ್ನ ಸಹಿ ಇರುವ ಬಗ್ಗೆ ಅಥವಾ ನಾನು ಸಹಿ ಮಾಡಿದ ಬಗ್ಗೆ ನೆನಪಿಲ್ಲ. ನನಗೆ ಎಂ.ಬಿ.ಪೂವಣ್ಣ ಎಂಬ ವಕೀಲರು ಗೊತ್ತಿಲ್ಲ. ನಿಪಿ 4 ರಲ್ಲಿರುವ ಸಹಿಗಳು ನನ್ನ ಸಹಿಗಳು ಎಂದರೆ ಸರಿಯಲ್ಲ. ಬಿ.ಆರ್.ಶಿವಕುಮಾರ್ ಎಂಬ ವಕೀಲರು ನನಗೆ ಗೊತ್ತಿಲ್ಲ. ನಿಪಿ 4 ರ ಅಧಿಕಾರ ಪತ್ರವನ್ನು 1 ನೇ ಪ್ರತಿವಾದಿಗೆ ನೋಟರಿ ವಕೀಲರ ಮುಂದೆ ನಾನು ಬರೆದುಕೊಟ್ಟಿದ್ದೇನೆ ಮತ್ತು ಅದರಲ್ಲಿರುವ ಸಹಿಗಳು ನನ್ನ ಸಹಿಗಳು ಎಂದರೆ ಸರಿಯಲ್ಲ.

ಸದರಿ ಅಧಿಕಾರಪತ್ರ ದಲ್ಲಿ ಬಿ.ಆರ್.ಶಿವಕುಮಾರ್ ವಕೀಲರು ನನ್ನನ್ನು ಗುರುತಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ವಕೀಲರು ಈಗ ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನೋಟರಿ ವಕೀಲರಾದ ಎಂ.ಬಿ.ಪೂವಣ್ಣ ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ನಾನು ನಿಪಿ 4 ರಂತೆ ಅಧಿಕಾರ ಪತ್ರ ಮತ್ತು ಅದರಲ್ಲಿ ಹೇಳಿರುವಂತೆ ದಿಃ10.3.1995 ರಂದು ಕರಾರು ಪತ್ರ ಬರೆದುಕೊಟ್ಟಿ ಸ್ವಾಧೀನವಹಿಸಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮೂಲ ಕ್ರಯ ಪತ್ರ ವನ್ನು 1 ನೇ ಪ್ರತಿವಾದಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನನ್ನ ವಕೀಲರು ಪಡೆದುಕೊಂಡಿದ್ದಾರೆ. ನಿಪಿ 3 ರಿಂದ ನಿಪಿ 9 ರ ದಾಖಲೆಗಳನ್ನು ನನ್ನ ವಕೀಲರೇ ಪಡೆದುಕೊಂಡಿದ್ದಾರೆ. ನಾನು ದಾವಾ ಆಸ್ತಿಗೆ ಈಗಲೂ ಸಹ ಕಂದಾಯ ಕಟ್ಟುತ್ತಿದ್ದೇನೆ. ಕಂದಾಯ ರಶೀದಿಗಳು ನನ್ನ ಬಳಿ ಇವೆ. ಅವುಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ನಿಪಿ 4 ರಂತೆ ದಾಖಲೆ ಬರೆದುಕೊಟ್ಟ ನಂತರ ಕಂದಾಯ ಕಟ್ಟಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ನಾನು ಬರೆದುಕೊಟ್ಟ ನಿಪಿ 4 ರ ಆಧಾರದ ಮೇಲೆ ದಿಃ23.4.2007 ರಂದು ನಿಪಿ 5 ರಂತೆ 2 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಂತರ 2 ನೇ ಪ್ರತಿವಾದಿಯು ದಿಃ14.11.2007 ರಂದು ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ನಂತರ 3 ನೇ ಪ್ರತಿವಾದಿಯು ನಿಪಿ 7 ರಂತೆ 2 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಂತರ 2 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು

4ನೇ ಪ್ರತಿವಾದಿಗೆ ಮಾರಾಟ ದಿಃ9.2.2010ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 7ರ ಕ್ರಯ ಪತ್ರದ ಜೊತೆ ಒಂದು ನಕಾಶೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 5 ರಿಂದ ನಿಪಿ 8 ರ ಕ್ರಯ ಪತ್ರಗಳ ಆಧಾರದ ಮೇಲೆ ಕಾಲ ಕಾಲಕ್ಕೆ ಖಾತೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಈಗ 4ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಇದೆ.

ಈ ದಾವಾ ಹಾಕುವ ಕಾಲಕ್ಕೆ ದಾವಾ ಆಸ್ತಿಯ ಮೌಲ್ಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಹಾಕುವ ಕಾಲಕ್ಕೆ 20 ಲಕ್ಷಕ್ಕೂ ಹೆಚ್ಚು ಮೌಲ್ಯ ಇತ್ತು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ಮೇಲೆ ಹೇಳಿದ ವ್ಯವಹರಣೆಗಳು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಮಾಲೀಕನಲ್ಲ ಮತ್ತು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಓ.ಹೇ.ಕೇ.ಸರಿ.ಇದೆ.

ಸಹಿ/-
(ವಿಜಯಕುಮಾರ್)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.